**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 856/2018**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ಪಿಡಬ್ಲ್ಯೂ.01**

**ದಿನಾಂಕಃ 24.12.2025 ಸಿಡಬ್ಲ್ಯೂ.01**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಸಿ ಎನ್ ವಕೀಲರಿಂದಃ**

ನನ್ನ ಹೇಳಿಕೆಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಪೊಲೀಸರು ಬರೆದಿರುತ್ತಾರೆ. ಸದರಿಯವರ ಹೆಸರು ಪದನಾಮೆ ನನಗೆ ಗೊತ್ತಿಲ್ಲ. ನಿಪಿ.8 ಹೇಳಿಕೆಯನ್ನು ಬೆಳಗಿವ ಜಾವ ಬರೆದಿರುತ್ತಾರೆ. ನಿಖರವಾದ ಸಮಯ ನನಗೆ ನೆನಪಿಲ್ಲ. ಕಾರಿನ ಹೆಡ್ ಲೈಟಗಳು ಚೆನ್ನಾಗಿ ಇರುತ್ತವೆ ಮತ್ತು ಪ್ರಕಾಶಮಾನವಾದ ಬೆಳಕು ಇರುತ್ತದೆ ಎಂದರೆ ಸರಿ. ಘಟನಾ ದಿನ ನಾನು ಮತ್ತು ನನ್ನ ಗಂಡ ಮುಂದೆ ಕುತಿಳಿದ್ದೆವು. ನನ್ನ ಗಂಡ ಚಾಲನೆ ಮಾಡುತ್ತಿದ್ದರು. ಮೃತ ಸಂತೋಷಿ ಮತ್ತು ಚಂದ್ರಶೇಖರ ಕಾರಿನ ಮುಂದೆ ಕುತಿಳಿದ್ದರು. ಸಾಮಾನ್ಯವಾಗಿ ಕಾರಿನ ಮುಂಬಾಗ ಡಿಕ್ಕಿ ಪಡಿಸಿದಾಗ ಮುಂದೆ ಕುಳಿತವರು ಸಾವನ್ನಪ್ಪುತ್ತಾರೆ ಎಂದರೆ ಸರಿ. ಸಾಕ್ಷಿಯು ಕಾರಿನ ಏರ್ ಬ್ಯಾಕ್ ಓಪನ್ ಆಗಿದ್ದರಿಂದ ನಮಗೆ ಏನು ಆಗಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ ರಸ್ತೆ ಏರುಮುಖ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ವಾಹನಗಳನ್ನು ನಿಗದಿತ ಸ್ಥಳದಲ್ಲಿ ನಿಲ್ಲಿಸಲು ನಿಲ್ದಾಣ ಇರುತ್ತವೆ ಎಂದರೆ ಸರಿ. ಆರೋಪಿ ಆ ರೀತಿ ವಾಹನ ನಿಲ್ಲಿಸಿರಲಿಲ್ಲ. ವಾಹನಗಳಲ್ಲಿ ಯಾಂತ್ರಿಕ ತೊಂದರೆ ಮತ್ತು ವೈರಿಂಗ್ ಸಮಸ್ಯೆ ಇದ್ದಾಗ ರಸ್ತೆಯ ಮಧ್ಯದಲ್ಲಿ ನಿಲ್ಲುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಅಪಘಾತಕ್ಕಿಂತ 15 ನಿಮಿಷ ಪೂರ್ವದಲ್ಲಿ ಅಪಘಾತಕ್ಕೊಳಗಾದ ಲಾರಿ ಕೆಟ್ಟು ನಿಂತಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ಲೋಡನ್ನು ಹೊತ್ತ ಲಾರಿಯನ್ನು ಇಬ್ಬರು ವ್ಯಕ್ತಿಗಳು ಒತ್ತಿ ತರಲು ಸಾಧ್ಯವಿಲ್ಲ ಎಂದರೆ ಸರಿ. ಸಾಕ್ಷಿಯು ಆದರೆ ಆ ದಿನ ಲಾರಿಯನ್ನು ಠಾಣೆಗೆ ತಂದಿದ್ದರು ಎಂದು ನುಡಿಯುತ್ತಾರೆ. ರಾತ್ರಿ ವೇಳೆ ಲಾರಿಯನ್ನು ರಿಪೇರಿ ಮಾಡುವವರು ಸಿಗುವುದಿಲ್ಲ ಎಂದರೆ ಸರಿ. ವೈರಿಂಗ ಸಮಸ್ಯೆ ಇದ್ದಾಗ ವಾಹನದ ಯಾವುದೇ ಲೈಟಗಳು ಅಥವಾ ಇಂಡಿಕೇಟರ್ ಗಳು ಹತ್ತುವುದಿಲ್ಲ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಕಲ್ಲಾಗಲಿ ಮತ್ತು ಕಟ್ಟಿಗೆಗಳು ಸಿಗುವುದಿಲ್ಲ ಎಂದರೆ ಸರಿ. ಆದ್ದರಿಂದ ಲಾರಿಯ ಚಾಲಕ ಮತ್ತು ಕ್ಲೀನರಗೆ ಯಾವುದೇ ವಸ್ತುಗಳನ್ನು ಲಾರಿಗೆ ಅಡ್ಡ ನಿಲ್ಲಿಸಲು ಆಗಿಲ್ಲ ಎಂದರೆ ಸರಿ. ಬೆಳಿಗ್ಗೆ 2.00 ರಿಂದ 4.30 ರವರೆಗೆ ನಿದ್ದೆಯ ಸಮಯ ಎಂದರೆ ಎಲ್ಲರಿಗೂ ಆ ರೀತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಮೃತ ಚಂದನಾ ರವರು ಕಾರನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದಾನ ರವರ ಚಾಲನಾ ಪರವಾನಿಗೆ ಇಲ್ಲದ್ದರಿಂದ ನನ್ನ ಗಂಡನ ಚಾಲನಾ ಪರವಾನಿಗೆ ನೀಡಿದ್ದೆವು ಎಂದರೆ ಸರಿಯಲ್ಲ. ಕಾರಿನ ಚಾಲಕರಿಗೆ ಹೆಡ್ ಲೈಟ ಬೆಳಕಿನಲ್ಲಿ ಮುಂಬರುವ ವಾಹನಗಳು ಕಾಣುವುದಿಲ್ಲ ಎಂದರೆ ಸರಿ. ನಮ್ಮ ಕಾರಿನ ಚಾಲಕನ ತಪ್ಪಿನಿಂದ ಅಪಘಾತ ಸಂಬವಿಸಿದೆ ಎಂದರೆ ಸರಿಯಲ್ಲ. ಲಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಧನ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಅಪಘಾತ ಕಾರು

ಚಾಲಕನ ತಪ್ಪಿನಿಂದ ಆಗಿದ್ದರೂ ಸಹ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಕಾಣುವ ಲಾರಿ ಸಂಪೂರ್ಣವಾಗಿ ರಸ್ತೆ ಎಡಬಾಗಕ್ಕೆ ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ